ಹಾಕ್ತಾರೆ’ ಎಂದು ಮಹಿಳೆಯರು ಕೆಲವರು ತಕರಾರು ತೆಗೆದರು.

ನಾಗರತಿಯ ನೆನಪಿನಿಂದ ಇಷ್ಟೆಲ್ಲಾ ಹಲ್‌ಚಲ್ ಉಂಟಾದರೂ ಆಕೆ ಈಗ ಎಲ್ಲಿದ್ದಾಳೆ ಎಂಬ ಬಗ್ಗೆ ಮಾತ್ರ ಯಾರಲ್ಲೂ ಉತ್ತರವಿರಲಿಲ್ಲ. ಆದರೆ ಇದಾದ ಕೆಲವು ದಿನಗಳಲ್ಲಿ ವಿಸ್ಮಯವೊಂದು ಸಂಭವಿಸಿತ್ತು. ಅದು ಭಾನುವಾರದ ಬೆಳಗು. ಹೊಸಬಣ್ಣನಿಗೆ ಕನ್ನಡ ಪತ್ರಿಕೆಗಳನ್ನು ಕೊಳ್ಳುವುದಿತ್ತು. ಜೊತೆಗೆ ಬ್ರೇಕ್‌ಫಾಸ್ಟೂ ಆಯ್ತು ಅಂತ ಮುಂಬೈನ ಮಾತುಂಗಾ ಪೂರ್ವದಲ್ಲಿರುವ ಪ್ರಸಿದ್ಧ ರಾಮಾಶ್ರಯ ಹೊಟೇಲಿಗೆ ಹೋಗಿದ್ದ. ಬಿಸಿಬಿಸಿ ದೋಸೆ ತಿಂದು ಪೈನೆಪಲ್ ಫ್ಲೇವರಿನ ಶಿರಾ ತಿನ್ನುತ್ತಿರುವಾಗ, ಹೊರನಡೆಯುತ್ತಿದ್ದ ಮಹಿಳೆಯೊಬ್ಬಳು ಟೇಬಲ್ ಮೇಲೆ ಹರಡಿದ್ದ ಕನ್ನಡ ಪತ್ರಿಕೆಗಳನ್ನು ಗಮನಿಸಿ, ದೃಷ್ಟಿ ಮೇಲೆತ್ತಿ ಹೊಸಬಣ್ಣನನ್ನು ನೋಡಿ ಸಡನ್ನಾಗಿ, ‘ಆರಂಚ್ಯೂ ನ್ಯೂ ಕಲರ್?’ ಎಂದಳು. ಹೊಸಬಣ್ಣ ಸಿನಿಮಾಗಳಲ್ಲಿ ಮಾತ್ರ ಇಂಥ ದೃಶ್ಯಗಳನ್ನು ಕಂಡಿದ್ದ. ಅವನ ಕಣ್ಣೆದುರು ನಿಂತವಳು ಅದೇ ನಾಗರತಿ!

*

ಬದುಕಿನ ಮಹತ್ವದ ಕಾಲಾವಧಿಯು ಹೊಸಬಣ್ಣ ಮತ್ತು ನಾಗರತಿಯರನ್ನು ಪ್ರತ್ಯೇಕವಾಗಿ ಉರುಳಿಸುತ್ತಾ ಈಗ ಪರಸ್ಪರ ಮುಖಾಬಿಲೆ ಮಾಡಿಸಿತ್ತು. ತನ್ನ ಜೀವನೋತ್ಸಾಹವನ್ನು ಆಕಾಶಕ್ಕೆ ವಿಸ್ತರಿಸಿಕೊಳ್ಳುತ್ತಿದ್ದಂಥ ನಾಗರತಿಯೂ, ಸಮುದ್ರದಂಥ ಭಾವನೆಗಳನ್ನೂ ಮುಷ್ಟಿ ಹೃದಯದೊಳಗೆ ಬಂಧಿಸಿಟ್ಟುಕೊಳ್ಳುತ್ತಿದ್ದಂಥ ಹೊಸಬಣ್ಣನೂ ಸಂಧಿಸುವ ಕ್ಷಣವೊಂದು ಕೊನೆಗೂ ನಿರ್ಮಾಣವಾಗಿತ್ತು. ಅವಳ ದರ್ಶನದಿಂದಾದ ಎಗ್ಸೈಟ್‌ಮೆಂಟು ತಣಿಯಲು ಹೊಸಬಣ್ಣನಿಗೆ ಒಂದೆರಡು ದಿನಗಳೇ ಬೇಕಾದವು. ಕಾಲೇಜಿನಲ್ಲಿ ಸಾಮಾನ್ಯ ವಿದ್ಯಾರ್ಥಿಯಾಗಿದ್ದ, ಆಗ ಕಥೆಗಾರನೂ ಆಗಿರದಿದ್ದ ತಾನು ಮೂರು ದಶಕಗಳ ನಂತರವೂ ಅವಳ ನೆನಪಲ್ಲಿ ಉಳಿದಿರುವೆ ಎಂಬ ಸೋಜಿಗವು ಅವನ ಕಿವಿಗಳನ್ನು ಒಂದಿಡೀ ದಿನ ಬೆಚ್ಚಗಿಟ್ಟಿತ್ತು. ಆಕಸ್ಮಿಕವಾಗಿ ಆದ ಅಂದಿನ ಭೇಟಿ ಅವಸರದಲ್ಲೇ ಮುಗಿದರೂ ಹೋಗುವಾಗ ಮೊಬೈಲ್ ನಂಬರ್ ಕೊಟ್ಟು ಪುಣ್ಯ ಕಟ್ಟಿಕೊಂಡಿದ್ದಳು. ವಾಟ್ಸಾಪಿನಲ್ಲಿ ನಾಗರತಿಯ ಡಿಪಿ ಮತ್ತು ಸ್ಟೇಟಸ್ ಚಿತ್ರಗಳಿಂದ ಅವಳ ಕುರಿತಾದ ಒಂದು ಝಲಕು ಅವನಿಗೆ ದಕ್ಕಿತ್ತು. ಫೋಟೋಗಳಲ್ಲಿಯ ಅವಳ ರಿಚ್ ಕಾಸ್ಟ್ಯೂಮ್ಸು, ಆರ್ನಾಮೆಂಟ್ಸು, ಲೊಕೇಶನ್ಸು ನಾಗರತಿಯದು ಹೈಫೈ ಲೈಫು ಎಂಬುದನ್ನು ಹೇಳುತ್ತಿದ್ದವು.

ನಾಗರತಿ ವಿಶಿಷ್ಟ ಶೈಲಿಯಲ್ಲಿ ಫೋಟೋಕ್ಕೆ ಪೋಸ್ ಕೊಡುವುದನ್ನು ಹೊಸಬಣ್ಣ ಗಮನಿಸಿದ್ದ. ಒಂದು ಕಾಲು ಹಿಂದಕ್ಕೆ ಒಯ್ದು ಆ ಪಾದವನ್ನು ಲಂಬವಾಗಿಟ್ಟು, ಹೆಬ್ಬೆರಳ ತುದಿಯಷ್ಟೇ ನೆಲ ಸ್ಪರ್ಶಿಸುವ ರೀತಿ ಸುಂದರವಾಗಿರುತ್ತಿತ್ತು. ಕೃಷ್ಣನು ಕೊಳಲೂದುವಾಗ ಒಂದು ಕಾಲನ್ನು ಮುಂದಿಟ್ಟರೆ, ನಾಗರತಿ ಹಿಂದೆ ಬಾಗಿಸುವ ಆ ನಿಲುವು ಹೊಸಬಣ್ಣನಿಗೆ ತುಂಬಾ ಇಷ್ಟವಾಯಿತು. ಅವಳು ತನ್ನ ಆರು ಫೂಟು ಎತ್ತರದ ನಿಲುವನ್ನು ಹೀಗೆ ಕಲಾತ್ಮಕಗೊಳಿಸುವುದನ್ನು ಅವನು ಮೆಚ್ಚಿಕೊಂಡಿದ್ದ. ಮಳೆಗಾಲದಲ್ಲಿ ಮುಂಬೈನ ವರ್ಲಿ ಸೀ ಫೇಸ್ ಮೇಲೆ ತೆಗೆಸಿಕೊಂಡ ಅಂಥದ್ದೇ ಒಂದು ಮೋಹಕ ಭಂಗಿಯ ಚಿತ್ರವನ್ನು ನಾಗರತಿ ಸ್ಟೇಟಸ್ಸಿಗೆ ಹಾಕಿದ್ದಳು. ಹೊಸಬಣ್ಣ ‘ಆಹಾ! ದೃಶ್ಯಕಾವ್ಯದಂತಿದೆ!’ ಎಂದು ಕಾಮೆಂಟಿಸಿದ.

ನಾಗರತಿ ‘ಥ್ಯಾಂಕ್ಯೂ ನ್ಯೂಕಲರ್!’ ಎಂದು ಪ್ರತಿಕ್ರಿಯಿಸಿದಳು. ನ್ಯೂ ಕಲರ್! ಕಾಲೇಜಲ್ಲಿ ಒಮ್ಮೆ ಗ್ರಾಮರ್ ತಪ್ಪಾಗಿದ್ದಕ್ಕೆ ಇಂಗ್ಲಿಷ್ ಲೆಕ್ಚರರೊಬ್ಬರು ಹೊಸಬಣ್ಣನ ಹೆಸರನ್ನು ಹಾಗೆ ತರ್ಜುಮೆಗೊಳಿಸಿದ್ದರು. ಆ ಹೆಸರು ಕ್ಲಾಸಲ್ಲಿ ಮಾತ್ರವಲ್ಲ, ಕ್ಯಾಂಪಸ್ಸಿನಲ್ಲೂ ವೈರಲ್ ಆಗಿತ್ತು. ತನ್ನ ಪಾಡಿಗೆ ಇದ್ದೂ ಇರದಂತೆ ಇರುತ್ತಿದ್ದ ಹೊಸಬಣ್ಣನಿಗೆ ಒಂಚೂರು ‘ಜನಪ್ರಿಯತೆಯನ್ನೂ’ ತಂದಿತ್ತು. ನಾಗರತಿ ಇಷ್ಟು ವರ್ಷಗಳ ನಂತರವೂ ಅದನ್ನು ನೆನಪಿಟ್ಟುಕೊಂಡಿದ್ದು ಹೊಸಬಣ್ಣನಿಗೆ ಅಚ್ಚರಿಯನ್ನೂ ಆತ್ಮೀಯತೆಯನ್ನೂ ತಂದಿತ್ತು; ಮೂರು ದಶಕಗಳ ದೀರ್ಘಕಾಲವನ್ನು ಕ್ಷಣಗಳ ಲೆಕ್ಕಕ್ಕೆ ಕತ್ತರಿಸುವ ಸಾಪೇಕ್ಷ ಸಿದ್ಧಾಂತದ ಪ್ರಾಯೋಗಿಕ ಅನುಭವ ಉಂಟಾಗಿತ್ತು.

‘ಬೈ ದಿ ವೇ, ನೀವು ಕವಿಯಾಗಿ ಹೈಟಾದದ್ದು ಯಾವಾಗ ಮಾರಾಯ್ರೆ?’ ಎಂದು ಇನ್ನೊಂದು ಮೆಸೇಜು ಬಂತು. ನಗುವ ಇಮೋಜಿಗಳನ್ನು ಧಾರಾಳವಾಗಿ ಅಂಟಿಸಿದ್ದಳು. ತನ್ನ ಕುಳ್ಳತನವನ್ನು ಗೇಲಿ ಮಾಡಿದರೂ, ಸದ್ಯ ಅವಳಿಗೆ ತಾನು ಕವಿ ಎನ್ನುವುದು ತಿಳಿದಿದೆಯಲ್ಲ